ಅಧ್ಯಕ್ಷರು: ಇನ್ನು 15 ನಿಮಿಷದಲ್ಲಿ ಸದನವನ್ನು ಮುಂದೂಡುತ್ತೇನೆ. ಅಷ್ಟರೊಳಗೆ ಎಷ್ಟು ಸದಸ್ಯರು ಮಾತನಾಡಲು ಸಾಧ್ಯವೋ ಮಾತನಾಡಿ. ಉಳಿದ ಸದಸ್ಯರುಗಳ ಪ್ರಸ್ತಾಪದ ವಿಷಯಗಳಿಗೆ ಅವಕಾಶ ಸಿಗದಿದ್ದರೂ ಕೂಡ ಅವಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ಕಳುಹಿಸಿಕೊಡುತ್ತೇವೆ. ಸುಬ್ಬಾರೆಡ್ಡಿಯವರೆ ನೀವು ಮಾತನಾಡಿ.

ವಿಷಯ: (ಇ) ಬೆಂಗಳೂರಿನಲ್ಲಿರುವ ಲೈವ್ ಬ್ಯಾಂಡ್‌ಗಳು ಹಾಗು ಎಡಿಯೋಪಾರ್ಲರ್ ಗಳಿಂದ ನಾಗರೀಕರಿಗೆ ಉಂಟಾಗಿರುವ ತೊಂದರೆ

ಶ್ರೀ ಕೆ.ಎನ್. ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಅಧ್ಯಕ್ಷರೆ, ನಾನು ಹದಿನೈದು ದಿವಸಗಳ ಮುಂಚೆಯೇ ಶೂನ್ಯ ವೇಳೆಯಲ್ಲಿ ಬೆಂಗಳೂರಿನಲ್ಲಿರುವ ಕ್ಲಬ್‌ಗಳಿಂದ, ಲೈವ್ ಬ್ಯಾಂಡ್‌ಗಳಿಂದ, ವಿಡಿಯೋ ಪಾರ್ಲರ್‌ಗಳಿಂದ ಜನಗಳಿಗೆ ತೊಂದರೆಯಾಗಿದೆಯೆಂದು ಹೇಳಿದ್ದೆ. ಇಂದು ಇವುಗಳು ದಿನೇ ದಿನೇ ಚಾಪ್ತಿಯಾಗಿ ಜನಸಾಮಾನ್ಯರಿಗೆ ಹೆಚ್ಚು ತೊಂದರೆಯನ್ನುಂಟುಮಾಡಿವೆ. ಇವುಗಳನ್ನು ನಿಲ್ಲಿಸುವುದಕ್ಕೆ ಗೃಹ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಸದನದಲ್ಲಿ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಕಾನೂನು ಬಾಹಿರವಾಗಿ ಇರುವ ಯಾವುದೇ ಕ್ಲಬ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾವ ಕ್ಲಬ್‌ಗಳು ರಿಜಿಸ್ಟ್ರೇಶನ್ ಆಫ್ ಸೊಸೈಟಿ ಆಕ್ಟ್ ಕೆಳಗಡೆ ರಿಜಿಸ್ಟರ್ ಆಗಿದ್ದು ಕಾನೂನು ಪ್ರಕಾರ ನಡೆದುಕೊಂಡು ಹೋಗುತ್ತಿವೆಯೋ ಅಂಥವುಗಳ ಮೇಲೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅಂಥ ಕ್ಲಬ್‌ಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ಏನಾದರೂ ನಡೆಯುತ್ತಿದ್ದರೆ ಕಾನೂನಿನ ಪ್ರಕಾರ ಕ್ರಮವನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಕೊಳ್ಳುತ್ತೇವೆ. ಅಂಥ ಕ್ಲಬ್‌ಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ನನಗೆ ವಿವರ ಕೊಟ್ಟು ಹೆಸರನ್ನು ಹೇಳಿದರೆ ಕ್ರಮ ಜರುಗಿಸುತ್ತೇನೆ. ಇನಲ್ಲದೇ ಯಾವುದಾದರೂ ರಿಜಿಸ್ಟರ್ ಆಗದ ಕ್ಲಬ್‌ಗಳು ಎಲ್ಲಾದರೂ ನಡೆಯುತ್ತಿದ್ದರೆ ಅಂಥವುಗಳ ಬಗ್ಗೆಯೂ ಮಾನ್ಯ ಸದಸ್ಯರು ವಿವರ ಕೊಟ್ಟರೆ ನಿರ್ದಾಕ್ಷಿಣ್ಯವಾಗಿ ರೈಡ್ ಮಾಡಿಸಲು ಅಥವಾ ಸರ್‌ಪ್ರೈಸ್ ವಿಸಿಟ್ ಮಾಡಿಸುತ್ತೇನೆ. ಆದುದರಿಂದ ಮಾನ್ಯ ಸದಸ್ಯರು ಅಂಥ ಕ್ಲಬ್‌ಗಳ ಹೆಸರು ಇದ್ದರೆ ಹೇಳಬೇಕು. ಅದನ್ನು ಬಿಟ್ಟು ಜನರಲ್ಲಾಗಿ ಹೇಳಿದರೆ ಯಾವ ಕ್ಲಬ್ ಮೇಲೆ ಎಂದು ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿಯೇ ಹಲವಾರು ಕ್ಲಬ್‌ಗಳು ನಡೆಯುತ್ತಿವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಕೇವಲ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಎಂದು ಹೇಳಿದರೆ ಹೇಗೆ? ಯಾವ ಕ್ಲಬ್ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಹೆಸರನ್ನು ಹೇಳಬೇಡವೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಹಲವಾರು ಕ್ಲಬ್‌ಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿವೆ. ಆದರೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಇವರಿಗೆ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗದಿದ್ದರೆ ನಮಗೆ ಹೇಳಲಿ. ನಾವೇ ಯಾವ

ರೀತಿಯಲ್ಲಿ ಆ ಕ್ಲಬ್‌ಗಳ ಮೇಲೆ ಕ್ರಮ ತೆಗೆದುಕೊಂಡು ನಿಲ್ಲಿಸಬೇಕೋ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ನಿರ್ದಿಷ್ಟವಾಗಿ ಇಂಥ ಕ್ಲಬ್ ಎಂದು ಹೆಸರು ಹೇಳಿ ವಿವರವನ್ನು ಕೊಡದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ವಿಷಯ: (ಈ) ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಕೊಡಬೇಕಾಗಿರುವ ಕಬ್ಬು ಪೂರೈಕೆ ಬಾಕಿಯ ಹಣದ ಬಗ್ಗೆ

ಶ್ರೀ ಹೆಚ್.ಸಿ. ಬಸವರಾಜ್(ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೆ, ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಗೆ ಅಲ್ಲಿಯ ಸುತ್ತಮುತ್ತಲ ರೈತರು ಕಬ್ಬನ್ನು ಪೂರೈಕೆ ಮಾಡಿ ದೀರ್ಘಾವಧಿಯೇ ಆಗಿದ್ದರೂ ಇನ್ನು ಆ ರೈತರುಗಳಿಗೆ ಬಾಕಿ ಹಣವನ್ನು ಕೊಟ್ಟಿಲ್ಲ. ಆ ಕಾರ್ಖಾನೆಗೆ 6 ಕೋಟಿ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದರೂ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ರೈತರಿಗೆ ತಮಗೆ ಬರಬೇಕಾದ ಹಣ ಸಕ್ಕರೆ ಕಾರ್ಖಾನೆಯಿಂದ ಸಕಾಲಕ್ಕೆ ಬರದೇ ಸಾಲ ತೀರಿಸಲು ಕೂಡ ಆಗದ ಪರಿಸ್ಥಿತಿ ಬಂದಿರುವುದರಿಂದ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಲು ಸಂಬಂಧಪಟ್ಟ ಮಂತ್ರಿಗಳು ಈಗ ಮೇಲ್ಮನೆಯಲ್ಲಿದ್ದಾರೆ, ಸಾಧ್ಯವಾದರೆ ಅವರನ್ನು ಕರೆಸಿ ಉತ್ತರ ಕೊಡಿಸುತ್ತೇನೆ. ಈಗ ಆತ್ಮಾನಂದರವರು ಮಾತನಾಡಿ.

ವಿಷಯ: (ಉ) ಮೈಸೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಪಾವತಿ ಮಾಡಬೇಕಾಗಿರುವ ಕಬ್ಬು ಪೂರೈಕೆ ಹಣವನ್ನು ಕೊಡಿಸುವ ಬಗ್ಗೆ.

ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಪಾವತಿ ಮಾಡಬೇಕಾದ ಕಬ್ಬಿನ ಹಣವನ್ನು ನೀಡದಿರುವುದರಿಂದ ರೈತರು ಕೃಷಿ ಸಾಲವನ್ನು ಮರು ಪಾವತಿ ಮಾಡಲು ಸಾಧ್ಯವಾಗದಿರುವ ಬಗ್ಗೆ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ವಿ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೇ, ಮೈಸೂರು ಸಕ್ಕರೆ ಕಂಪನಿಯು 30-3-2001ರ ವರೆಗೆ 8,87,848 ಟನ್ ಕಬ್ಬನ್ನು ಅರೆದಿರುತ್ತದೆ. 6,48,231 ಕ್ವಿಂಟಾಲ್ ಸಕ್ಕರೆ ದಾಸ್ತಾನಿನಲ್ಲಿರುತ್ತದೆ. ಇಲ್ಲಿಯವರೆಗೆ ಲೆವಿ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಈ ಕೆಳಕಂಡಂತೆ ಸಕ್ಕರೆ ಮಾರಾಟವಾಗಿರುತ್ತದೆ.

ಏಪ್ರಿಲ್‌ನಿಂದ ಮಾರ್ಚ್ 30ರ ವರೆಗೆ (ಕ್ವಿಂಟಾಲ್‌ಗಳಲ್ಲಿ)

ಮುಕ್ತ	4,50,645	-	ರೂ.59.25 ಕೋಟಿಗಳು
ಲೆವಿ	2,77,388	-	ರೂ.30.58 ಕೋಟಿಗಳು